**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 17 ಪ್ರಾ.ಸಾ. : 13**

ಸಾಕ್ಷಿಯ ಹೆಸರು : ಉಮೇಶ ಶಿವಳ್ಳಿ
ತಂದೆಯ ಹೆಸರು : ಸಿದ್ದಪ್ಪ ಶಿವಳ್ಳಿ
ವಯಸ್ಸು : 66 ವರ್ಷ
ಉದ್ಯೋಗ : ನಿವೃತ್ತ ಡಿ ವೈ ಎಸ್ ಪಿ
ವಾಸ : ಧಾರವಾಡ

**ದಿನಾಂಕಃ 15-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಆಗಸ್ಟ್ 2012 ರಿಂದ ಅಕ್ಟೋಬರ್ 2013 ರವರೆಗೆ ಆರಕ್ಷಕ ಉಪಾಧೀಕ್ಷಕ ಎಂದು ಲೋಕಾಯುಕ್ತ ಕಾರವಾರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 16.09.2013 ರಂದು ಈ ಪ್ರಕರಣದ ಫಿರ್ಯಾದುದಾರರಾದ ದೋಸಾ-1 ರವರು ಒಂದು ಲಿಖಿತ ದೂರನ್ನು ಕೊಟ್ಟರು. ಆ ಮೇರೆಗೆ ನಮ್ಮ ಠಾಣೆಯ ಮೊಕದ್ದಮೆ ಸಂ. 5/2013 ಕಲಂ 7, 13(1)(ಡಿ) ಸಹಿತ 13(2) ಪಿ ಸಿ ಕಾಯ್ದೆ 1988 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿ ತನಿಖೆಯನ್ನು ಕೈಗೊಂಡೆ . ಈಗ ಆ ದೂರನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ದೂರನ್ನು ಈಗಾಗಲೇ ನಿ.ಪಿ. 3 ಎಂದು ಗುರುತಿಸಲಾಗಿದೆ. ಸಾಕ್ಷಿಯ ರುಜುವನ್ನು ನಿ.ಪಿ. 3(ಬಿ) ಎಂದು ಗುರುತಿಸಲಾಯಿತು. ಈಗ ನಾನು ನೋಂದಾಯಿಸಿದ ಪ್ರಥಮ ವರ್ತಮಾನ ವರದಿ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಪ್ರಥಮ ವರ್ತಮಾನ ವರದಿಯನ್ನು ನಿ.ಪಿ. 44 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 44(ಎ) ಎಂದು ಗುರುತಿಸಲಾಯಿತು. ಆ ದೂರಿನಲ್ಲಿ ಫಿರ್ಯಾದುದಾರ ತಾನು ಕುಮಟಾ ತಾಲೂಕಿನ ಸರ್ಕಾರಿ ಶಾಲೆಗಳಿಗೆ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಹಾಲಿನ ಪುಡಿಯನ್ನು ಸರ್ಕಾರಿ ಶಾಲೆಗಳಿಗೆ ವಿತರಿಸುವ ಗುತ್ತಿಗೆಯನ್ನು ಪಡೆದಿರುತ್ತೇನೆ. ವಿತರಣೆ ಮಾಡಿದ ಶಾಲೆಗಳ ಮುಖ್ಯಸ್ಥರಿಂದ ಹಾಲಿನ ಪುಡಿಯ ಪ್ರಮಾಣದ ಸ್ವೀಕೃತಿಯನ್ನು

ಪಡೆದುಕೊಂಡಿರುತ್ತೇನೆ. ಸದರಿ ಸ್ವೀಕೃತಿಗಳನ್ನು ಸಹಾಯಕ ನಿರ್ದೇಶಕರು , ಅಕ್ಷರ ದಾಸೋಹರಾದ ಶ್ರೀ ಗಣೇಶ ನಾಯ್ಕು ಇವರ ಹತ್ತಿರ ದೃಢೀಕರಿಸಿಕೊಳ್ಳಲು ಕಡತವನ್ನು ನೀಡಿರುತ್ತೇನೆ. ಅವುಗಳನ್ನು ದೃಢೀಕರಿಸಿ ನೀಡಲು ತನಗೆ ಶೇಕಡಾ 20 ರಂತೆ ರೂ. 5,000/- ಗಳನ್ನು ಕೊಟ್ಟರೆ ಮಾತ್ರ ದೃಢೀಕರಿಸಿ ಕೊಡುವುದಾಗಿ ಸಹಾಯಕ ನಿರ್ದೇಶಕರು , ಅಕ್ಷರ ದಾಸೋಹರಾದ ಗಣೇಶ ನಾಯ್ಕುರವರು ಹೇಳಿದ್ದಾರೆ ಎಂದು ಹಾಗೂ ನಾನು ನನ್ನ ಮೊಬೈಲ್ ಸಂ. 9480562001 ನೇದ್ದರಿಂದ ಸದರಿ ಗಣೇಶ ನಾಯ್ಕುರವರ ಮೊಬೈಲ್ ದೂರವಾಣಿ ಸಂ. 9448611195 ನೇದ್ದಕ್ಕೆ ಕರೆ ಮಾಡಿ ವಿಚಾರಿಸಿ ಸ್ವಲ್ಪ ಹಣವನ್ನು ಕಡಿಮೆ ಮಾಡಿ ಎಂದು ಕೇಳಿಕೊಂಡಿದ್ದು ಕೊನೆಗೆ ಅವರು ರೂ. 3,000/- ಕ್ಕೆ ಒಪ್ಪಿರುತ್ತಾರೆ. ನಾನು ಸದರಿ ಹಣವನ್ನು ಕಳುಹಿಸುತ್ತೇನೆ ಅಥವಾ ನಾನೇ ಬಂದು ಕೊಡುತ್ತೇನೆ ಎಂದು ತಿಳಿಸಿರುತ್ತೇನೆ. ನನಗೆ ಲಂಚದ ಹಣ ಕೊಟ್ಟು ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದಿರುವುದರಿಂದ ತನ್ನಿಂದ ರೂ. 3,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವ ಶ್ರೀ ಗಣೇಶ ನಾಯ್ಕು, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹರರವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲು ವಿನಂತಿ ಎಂದು ದೂರಿನಲ್ಲಿ ಹೇಳಿದ್ದರು. ಫಿರ್ಯಾದಿ ತಾನು ಸದರಿ ಗಣೇಶ ನಾಯ್ಕುರವರ ಜೊತೆ ಮೊಬೈಲ್ ಫೋನಿನಲ್ಲಿ ಮಾತನಾಡಿದ್ದನ್ನು ಧ್ವನಿ ಮುದ್ರಣ ಮಾಡಿಕೊಂಡಿದ್ದು ಅದನ್ನು ನಂತರದಲ್ಲಿ ಸಿ.ಡಿ. ಗೆ ಪರಿವರ್ತಿಸಿ ಹಾಜರುಪಡಿಸುತ್ತೇನೆ ಎಂದು ಇತ್ಯಾದಿಯಾಗಿ ಫಿರ್ಯಾದಿಯಲ್ಲಿ ಹೇಳಿದ್ದರು. ಸದರಿ ದೂರಿನ ಮೇರೆಗೆ ಮುಂದಿನ ಕ್ರಮಕ್ಕಾಗಿ ಪಂಚರನ್ನು ಕಳುಹಿಸಲು ವಿನಂತಿ ಪತ್ರಗಳನ್ನು ಸಹಾಯಕ ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಹೆಸ್ಕಾಂರವರಿಗೆ ಪತ್ರಗಳನ್ನು ಕಳುಹಿಸಿಕೊಟ್ಟೆ. ಈಗ ಆ ಪತ್ರಗಳನ್ನು ನೋಡಿರುತ್ತೇನೆ. ಅವುಗಳನ್ನು ನಿ.ಪಿ. 45 ಮತ್ತು 46 ಎಂದು ಗುರುತಿಸಲಾಯಿತು. ಆ ಪತ್ರಗಳಲ್ಲಿ ನನ್ನ ರುಜು ಇವೆ. ಸಾಕ್ಷಿಯ ರುಜುಗಳನ್ನು ನಿ.ಪಿ. 45(ಎ) ಮತ್ತು 46(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ 2.00 ಗಂಟೆಯಾಗಿದ್ದರಿಂದ ಮಧ್ಯಾಹ್ನ 2.45 ಗಂಟೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ

ಸಾಕ್ಷಿಯನ್ನು ಪುನಃ ಮಧ್ಯಾಹ್ನ 2.55 ಗಂಟೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

2. ನಾನು ಕಳುಹಿಸಿದ ಮನವಿ ಪತ್ರಗಳ ಮೇರೆಗೆ ಪಂಚರಾದ ದೋಸಾ-2 ಮತ್ತು 3 ರವರು ನನ್ನ ಕಚೇರಿಗೆ ಅದೇ ದಿನ 16.09.2013 ರಂದು ಮಧ್ಯಾಹ್ನ 3.00 ಗಂಟೆಗೆ ಹಾಜರಾದರು. ಅಲ್ಲಿ ಸದರಿ ಪಂಚರಿಗೆ ಮೊಕದ್ದಮೆ ಸಂ. 5/2013 ರ ಕುರಿತು ಎಲ್ಲಾ ವಿಷಯವನ್ನು ತಿಳಿಸಿ ನಮ್ಮ ಪರಿಚಯ ಹೇಳಿ ಫಿರ್ಯಾದಿಯನ್ನು ಪರಿಚಯಿಸಿ ಫಿರ್ಯಾದಿಯವರು ಕೊಟ್ಟ ಫಿರ್ಯಾದನ್ನು ಪಂಚರಿಗೆ ಓದಲು ಕೊಟ್ಟಿದ್ದು ಅವರು ಅದನ್ನು ಓದಿ ತಿಳಿದುಕೊಂಡರು ಮತ್ತು ಫಿರ್ಯಾದಿಯು ಎಲ್ಲಾ ಸಂಗತಿಯನ್ನು ಪಂಚರಿಗೆ ಹೇಳಿದರು. ನಂತರ ಪಂಚರಾದ ದೋಸಾ-2 ರವರಿಗೆ ಪಂಚ-1 ಎಂದು ಹಾಗೂ ದೋಸಾ-3 ರವರಿಗೆ ಪಂಚ-2 ಎಂದು ನೇಮಿಸಿದೆ . ಠಾಣೆಯಲ್ಲಿ ಫಿರ್ಯಾದಿಗೆ ಆರೋಪಿಗೆ ಕೊಡಲು ತಂದಿರುವ ಹಣವನ್ನು ಹಾಜರುಪಡಿಸಲು ತಿಳಿಸಿದ ಮೇರೆಗೆ ಫಿರ್ಯಾದಿಯವರು ಹಣವನ್ನು ಹಾಜರುಪಡಿಸಿದರು. ಸದರಿ ಹಣವನ್ನು ಪಂಚ-1 ರವರಿಗೆ ಎಣಿಸಿ ಪರಿಶೀಲಿಸಿ ತಿಳಿಸಲು ಹೇಳಿದ ಮೇರೆಗೆ ಅವರು ಅವುಳಗನ್ನು ಪರಿಶೀಲಿಸಿ ಎಣಿಸಿದ್ದು ಅವು ರೂ. 1,000/- ಮುಖ ಬೆಲೆಯ 2 ನೋಟುಗಳು ಹಾಗೂ ರೂ. 500/- ಮುಖ ಬೆಲೆಯ 2 ನೋಟುಗಳಿದ್ದು ಒಟ್ಟು ರೂ. 3,000/- ಇರುವುದಾಗಿ ತಿಳಿಸಿ ಸದರಿ ನೋಟುಗಳ ಸಂಖ್ಯೆಗಳನ್ನು ಓದಿ ಹೇಳಿದರು. ಅವು 1) 1CM747593 (2) 1CM747594 (3) 5EQ406727 (4) 4DT745669 ಇರುತ್ತವೆ ಎಂದು ತಿಳಿಸಿದರು. ನಾನೂ ಸಹ ಆ ನೋಟುಗಳ ಸಂಖ್ಯೆಯನ್ನು ಪರಿಶೀಲಿಸಿದೆ. ಅದು

ಸರಿ ಇತ್ತು. ಅವುಗಳ ಪೈಕಿ ಅನುಕ್ರಮ ಸಂ. 1 ಮತ್ತು 2 ನೇಯದ್ದವುಗಳು ರೂ. 1,000/- ನೋಟುಗಳು ಹಾಗೂ ಅನುಕ್ರಮ ಸಂ. 3 ಮತ್ತು 4 ನೇಯದ್ದವುಗಳು ರೂ. 500/- ರ 2 ನೋಟುಗಳು ಇದ್ದು ಒಟ್ಟು ರೂ. 3000/- ಇರುತ್ತವೆ ಎಂದು ಪಂಚ-1 ತಿಳಿಸಿದರು. ನೋಟುಗಳ ಸಂಖ್ಯೆಗಳನ್ನು ಪಂಚನಾಮೆಯಲ್ಲಿ ನಾನು ನಮೂದಿಸಿದೆ. ನಂತರ ಸದರಿ ನೋಟುಗಳಿಗೆ ನನ್ನ ಸೂಚನೆಯ ಮೇರೆಗೆ ದೋಸಾ-5 ರವರು ಫಿನಾಪ್ತಲಿನ್ ಪುಡಿಯನ್ನು ನೋಟಿನ ಎರಡೂ ಬದಿಗೆ ತೆಳುವಾಗಿ ಸವರಿದರು. ಸದರಿ ಫಿನಾಪ್ತಲಿನ್ ಪುಡಿಯಿಂದ ಮಾದರಿಗಾಗಿ ಸ್ವಲ್ಪ ಪುಡಿಯನ್ನು ಪ್ರತ್ಯೇಕ ತೆಗೆದು ಒಂದು ಸಣ್ಣ ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ನಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 1 ಎಂದು ಗುರುತಿಸಿದೆ . ನಂತರ ಫಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ಪಂಚ-1 ರವರಿಗೆ ಮತ್ತೊಮ್ಮೆ ಎಣಿಸಿ ಪರಿಶೀಲಿಸಿ ನೋಡಲು ಹೇಳಿದ ಮೇರೆಗೆ ಅವರು ಅದನ್ನು ಎಣಿಸಿ ರೂ. 1,000/- ದ ಎರಡು ನೋಟುಗಳು ಮತ್ತು ರೂ. 500/- ರ 2 ನೋಟುಗಳು ಒಟ್ಟು ಕರೂ. 3000/- ಇರುವುದಾಗಿ ಹೇಳಿದರು. ನಂತರ ದೋಸಾ-8 ರವರು ಒಂದು ಪಿಂಗಾಣಿ ಬಟ್ಟಲಿನಲ್ಲಿ ಭಟ್ಟಿ ಇಳಿಸಿದ ನೀರನ್ನು ಹಾಕಿದ್ದು ಸದರಿ ಭಟ್ಟಿ ಇಳಿಸಿದ ನೀರಿನಿಂದ ಮಾದರಿಗಾಗಿ ಸ್ವಲ್ಪ ಭಟ್ಟಿ ಇಳಿಸಿದ ನೀರನ್ನು ಒಂದು ಗಾಜಿನ ಬಾಟಲಿಯಲ್ಲಿ ಪ್ರತ್ಯೇಕ ತೆಗೆದು ಮುಚ್ಚಳ ಬಂದ್ ಮಾಡಿ ಬಟ್ಟೆಯಿಂದ ಸುತ್ತಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ನಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 2 ಎಂದು ಗುರುತಿಸಿದೆ . ನಂತರ ಪಿಂಗಾಣಿ ಬಟ್ಟಲಿನಲ್ಲಿ ನನ್ನ ಸೂಚನೆಯಂತೆ ದೋಸಾ-8 ರವರು ಎರಡು ಚಮಚ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಹಾಕಿ ದ್ರಾವಣ ತಯಾರಿಸಿದರು. ಸದರಿ ದ್ರಾವಣವು ಬಣ್ಣ ರಹಿತವಾಗಿದ್ದು ಈ ದ್ರಾವಣ ತಯಾರಿಸಲು ಉಪಯೋಗಿಸಿದ ಸೋಡಿಯಂ ಕಾರ್ಬೋನೇಟ್ ಪುಡಿಯಿಂದ ಸ್ವಲ್ಪ ಪುಡಿಯನ್ನು ಮಾದರಿಗಾಗಿ ಪ್ರತ್ಯೇಕ ತೆಗೆದು ಒಂದು ಸಣ್ಣ ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ನಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 3 ಎಂದು ಗುರುತಿಸಿದೆ .

ತಯಾರಿಸಿದ ಬಣ್ಣ ರಹಿತ ದ್ರಾವಣದಿಂದ ಮಾದರಿಗಾಗಿ ಸ್ವಲ್ಪ ದ್ರಾವಣವನ್ನು ಪ್ರತ್ಯೇಕ ತೆಗೆದು ಒಂದು ಗಾಜಿನ ಬಾಟಲಿಯಲ್ಲಿ ಪ್ರತ್ಯೇಕ ತೆಗೆದು ಮುಚ್ಚಳ ಬಂದ್ ಮಾಡಿ ಬಟ್ಟೆಯಿಂದ ಸುತ್ತಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ನಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 4 ಎಂದು ಗುರುತಿಸಿದೆ . ನಂತರ ತಯಾರಿಸಿದ ಬಣ್ಣ ರಹಿತ ದ್ರಾವಣದಲ್ಲಿ ಫಿನಾಪ್ತಲಿನ್ ಪುಡಿ ಹಚ್ಚಿದ ನೋಟುಗಳನ್ನು ಎಣಿಸಿದ ಪಂಚ–1 ರವರ ಎರಡೂ ಕೈಗಳನ್ನು ಸದರಿ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ಅದನ್ನು ಒಂದು ಗಾಜಿನ ಬಾಟಲಿಯಲ್ಲಿ ಪ್ರತ್ಯೇಕ ತೆಗೆದು ಮುಚ್ಚಳ ಬಂದ್ ಮಾಡಿ ಬಟ್ಟೆಯಿಂದ ಸುತ್ತಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ನಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 5 ಎಂದು ಗುರುತಿಸಿದೆ . ನಂತರ ನಾನು ಸೋಡಿಯಂ ಕಾರ್ಬೋನೇಟ್ ನ ಬಣ್ಣ ಬದಲಾಗುವಿಕೆ ಬಗ್ಗೆ ವಿವರಿಸಿ ಫಿನಾಪ್ತಲಿನ್ ಪುಡಿ ಹಚ್ಚಿದ ನೋಟುಗಳನ್ನು ಸ್ವೀಕರಿಸಿದ ಮೇಲೆ ಅವರ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ಈ ರೀತಿ ಬಣ್ಣ ಬದಲಾಗುತ್ತದೆ ಎಂದು ತಿಳಿಸಿದೆ . ನಂತರ ಸದರಿ ಫಿನಾಪ್ತಲಿನ್ ಪುಡಿ ಹಚ್ಚಿದ ನೋಟುಗಳನ್ನು ಪಂಚ–1 ರವರಿಂದ ಫಿರ್ಯಾದಿಯ ಅಂಗಿಯ ಕಿಸೆಯಲ್ಲಿ ಇರಿಸಿದೆ . ಫಿರ್ಯಾದಿಗೆ ಸದರಿ ನೋಟುಗಳನ್ನು ಪದೇ ಪದೇ ಮುಟ್ಟಬಾರದಾಗಿ ಮತ್ತು ಆರೋಪಿ ಇದ್ದಲ್ಲಿ ಅವರ ಹತ್ತಿರ ಹೋದ ಮೇಲೆ ಮೊದಲು ತಮ್ಮ ಕೆಲಸದ ಬಗ್ಗೆ ಮಾತನಾಡಿ ಅವರು ಮತ್ತೆ ಲಂಚದ ಹಣ ಕೇಳಿದ್ದಲ್ಲಿ ಮಾತ್ರ ನಿಮಗೆ ವಹಿಸಿಕೊಟ್ಟಿರುವ ನೋಟುಗಳನ್ನು ಕೊಡಬೇಕಾಗಿ ಅಥವಾ ಅವರು ಅವುಗಳನ್ನು ಎಲ್ಲಿಯಾದರೂ ಇಡು ಎಂದು ಹೇಳಿದಲ್ಲಿ ಅವರು ಹೇಳಿದ ಜಾಗದಲ್ಲಿ ಇಡಬೇಕು ಎಂದು ನಾನು ತಿಳಿಸಿದೆ . ಅಲ್ಲದೇ ಸದರಿ ಲಂಚದ ಹಣದ ಬಗ್ಗೆ ನಿಗಾ ಇಟ್ಟು ನಂತರ ಹೊರಗೆ ಬಂದು ತಮ್ಮ ಪ್ಯಾಂಟಿನಿಂದ ಕರವಸ್ತ್ರವನ್ನು ತೆಗೆದು ಜಾಡಿಸಿ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಬೇಕು ಎಂದು ತಿಳಿಸಿದ್ದರ ಮೇರೆಗೆ ಅವರು ಒಪ್ಪಿಕೊಂಡರು. ನಂತರ ಫಿರ್ಯಾದಿಗೆ ಒಂದು ಡಿಜಿಟಲ್ ವಾಯ್ಸ್ ರೆಕಾರ್ಡರ್ ನ್ನು ಕೊಟ್ಟಿದ್ದು ಅದನ್ನು ಆರೋಪಿ ಇದ್ದಲ್ಲಿ ಅವರ ಹತ್ತಿರ ಹೋಗುವ ಪೂರ್ವದಲ್ಲಿ ಚಾಲು ಮಾಡಿಕೊಂಡು ಒಳಗೆ ಹೋಗಿ ನಿಮ್ಮ ಮತ್ತು ಆರೋಪಿಯ ನಡುವೆ ನಡೆಯುವ

ಸಂಭಾಷಣೆಯನ್ನು ಧ್ವನಿ ಮುದ್ರಣ ಮಾಡಿಕೊಳ್ಳಲು ತಿಳಿಸಿದೆ. ಸದರಿ ವಾಯ್ಸು ರೆಕಾರ್ಡರ್ ನ್ನು ಚಾಲು ಮತ್ತು ಬಂದ್ ಮಾಡುವ ಬಗ್ಗೆ ಮಾಹಿತಿಯನ್ನು ನಾನು ಹೇಳಿಕೊಟ್ಟೆ. ನಂತರ ಪಂಚ–1 ರವರಿಗೆ ಫಿರ್ಯಾದಿಯ ಸಂಗಡ ಆರೋಪಿ ಇದ್ದಲ್ಲಿಗೆ ಹೋಗಿ ಅನುಕೂಲವಾದ ಸ್ಥಳದಲ್ಲಿ ನಿಂತು ಫಿರ್ಯಾದಿ ಹಾಗೂ ಆರೋಪಿ ನಡುವೆ ನಡೆಯುವ ಸಂಭಾಷಣೆಯನ್ನು ಕೇಳಿ ಲಂಚದ ಹಣದ ಬಗ್ಗೆ ನಿಗಾ ಇಟ್ಟು ನಾವು ಬಂದಾಗ ನಮಗೆ ತಿಳಿಸಬೇಕು ಎಂದು ಹೇಳಿದೆ. ಅದನ್ನು ಅವರು ಒಪ್ಪಿಕೊಂಡರು. ವಸ್ತು ಸಂ. 1 ರಿಂದ 5 ಗಳನ್ನು ನಾನು ಜಪ್ತು ಮಾಡಿ ನನ್ನ ವಶಕ್ಕೆ ತೆಗೆದುಕೊಂಡು ಅವುಗಳನ್ನು ಠಾಣೆಯಲ್ಲಿದ್ದ ಆಲ್ಮೇರಾದಲ್ಲಿ ಭದ್ರವಾಗಿ ಇರಿಸಿದೆ. ನಂತರ ನನ್ನ ಸೂಚನೆ ಮೇರೆಗೆ ಪಂಚರು ಹಾಗೂ ಸಿಬ್ಬಂದಿಯವರು ತಮ್ಮ ತಮ್ಮ ಕೈಗಳನ್ನು ಸಾಬೂನಿನಿಂದ ತೊಳೆದುಕೊಂಡರು. ಅಲ್ಲದೇ ಸದರಿ ಪ್ರಾಯೋಗಿಕ  ಪಂಚನಾಮೆ ಕಾಲಕ್ಕೆ ಉಪಯೋಗಿಸಿದ ಪಿಂಗಾಣಿ ಬಟ್ಟಲುಗಳನ್ನು ಸಾಬೂನಿನಿಂದ ತೊಳೆಸಿದೆ . ಸದರಿ ವಿಧ್ಯಮಾನಗಳ ಬಗ್ಗೆ ಕಾಲಕಾಲಕ್ಕೆ ಛಾಯಾಚಿತ್ರವನ್ನು ದೋಸಾ–10 ರವರ ಮೂಲಕ ತೆಗೆಸಿರುತ್ತೇನೆ. ಈ ಮೇಲ್ಕಂಡ ಎಲ್ಲಾ ವಿಷಯಗಳ ಬಗ್ಗೆ ಪಂಚರ ಹೇಳಿಕೆ ಮೇರೆಗೆ ನಾನು ಕೊಟ್ಟ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ದೋಸಾ–9 ರವರಿಂದ ಬೆರಳಚ್ಚು ಮಾಡಿಸಿ ಪಂಚನಾಮೆಯನ್ನು ತಯಾರಿಸಿದೆ. ಸದರಿ ಪಂಚನಾಮೆಯನ್ನು ದಿನಾಂಕ 16.09.2013 ರಂದು ಮಧ್ಯಾಹ್ನ 3.00 ರಿಂದ ಸಂಜೆ 4.30 ಗಂಟೆವರೆಗೆ ಕಾರವಾರ ಲೋಕಾಯುಕ್ತ ಠಾಣೆಯಲ್ಲಿ ತಯಾರಿಸಿದೆ. ನಂತರ ನಾನು ಫಿರ್ಯಾದಿ ಹಾಗೂ ಪಂಚರಿಗೆ ಟ್ರ್ಯಾಪ್ ಕಾರ್ಯಾಚರಣೆಗೆ ಹೋಗುವ ಕುರಿತು ಠಾಣೆಯಲ್ಲಿಯೇ ಉಳಿಯುವಂತೆ ನಿರ್ದೇಶನ ನೀಡಿದೆ . ಸದರಿ ಪಂಚನಾಮೆಗೆ ಪಂಚರು ಮತ್ತು ಫಿರ್ಯಾದಿಯ ರುಜುಗಳನ್ನು ತೆಗೆದುಕೊಂಡೆ . ಅಲ್ಲದೇ ಬೆರಳಚ್ಚು ಮಾಡಿದ ದೋಸಾ–9 ರವರ ಸಹಿ ಪಡೆದೆ ಹಾಗೂ ನಾನೂ ಕೂಡಾ ಸಹಿ ಮಾಡಿದೆ. ಆ ಪಂಚನಾಮೆಯನ್ನು ಈಗ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಪ್ರತಿ ಪುಟದಲ್ಲಿ ಇದೆ. ಆ ಪಂಚನಾಮೆಯನ್ನು ಈಗಾಗಲೇ ನಿ.ಪಿ. 1 ಎಂದು ಗುರುತಿಸಲಾಗಿದೆ. ಅದರಲ್ಲಿ ಸಾಕ್ಷಿಯ ರುಜುವನ್ನು ಕೊನೆಯ ಪುಟದಲ್ಲಿ ನಿ.ಪಿ. 1(ಇ) ಎಂದು ಗುರುತಿಸಲಾಯಿತು. ನಾನು ಆಗ ಜಪ್ತು ಮಾಡಿದ ವಸ್ತು ಸಂ. 1 ರಿಂದ 5 ವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ನಾನು ಸದರಿ ವಸ್ತು ಸಂ. 1 ರಿಂದ 5 ಅನ್ನು ನೋಡಿರುತ್ತೇನೆ. ಅವುಗಳ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ

ರುಜು ಇದೆ. ಅವುಗಳನ್ನು ಈಗಾಗಲೇ ಮು.ಮಾ. 2, 3, 4, 5 ಮತ್ತು 6 ಎಂದು ಗುರುತಿಸಲಾಗಿದೆ. ಮು.ಮಾ. 6 ಈಗ ಒಡೆದಿದೆ. ಅವುಗಳ ಮೇಲೆ ಇರುವ ಸಾಕ್ಷಿಯ ರುಜುವನ್ನು ಮು.ಮಾ. 2(ಸಿ) ರಿಂದ 6(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆದಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅವುಗಳನ್ನು ನೋಡಿರುತ್ತೇನೆ. ಅವುಗಳನ್ನು ಈಗಾಗಲೇ ನಿ.ಪಿ. 6 ರಿಂದ 18 ಎಂದು ಗುರುತಿಸಲಾಗಿದೆ.

3. ಪ್ರಾಯೋಗಿಕ ಪಂಚನಾಮೆಯನ್ನು ಮಾಡಿದ ನಂತರ ಆರೋಪಿಯನ್ನು ಟ್ರ್ಯಾಪ್ ಮಾಡುವ ಕುರಿತು ಅದೇ ದಿನ ಕಾರವಾರದಿಂದ ಸಂಜೆ 4.30 ಗಂಟೆಗೆ ಇಲಾಖಾ ವಾಹನ ಸಂ. ಕೆಎ–42/ಜಿ–516 ನೇದ್ದರಲ್ಲಿ ನಾನು , ಫಿರ್ಯಾದಿ , ದೋಸಾ–7, ದೋಸಾ–2 ಮತ್ತು 3 ಪಂಚರು ಹಾಗೂ ಇಲಾಖಾ ವಾಹನ ಸಂ. ಕೆಎ–01/ಜಿ–3934 ನೇದ್ದರಲ್ಲಿ ಆರಕ್ಷಕ ನಿರೀಕ್ಷಕರು, ದೋಸಾ–12, 6, 8, 9, 11, 10 ಹಾಗೂ ಎ ಪಿ ಸಿ ಚಾಲಕ ಗಜಾನನ ನಾಯ್ಕ ನೇಯವರು ಸೇರಿ ಟ್ರ್ಯಾಪ್ ಸಲಕರಣೆಗಳೊಂದಿಗೆ ಸದರಿ ಎರಡೂ ವಾಹನಗಳಲ್ಲಿ ಹೊರಟು 18.00 ಗಂಟೆಗೆ ನಾವು ಕುಮಟಾ ನಗರಕ್ಕೆ ತಲುಪಿದೆವು . ಫಿರ್ಯಾದುದಾರ ತಮ್ಮ ಮೊಬೈಲ್ ಸಂ. 9480562001 ರಿಂದ ಆರೋಪಿಯ ಮೊಬೈಲ್ ಸಂ. 9448611195 ನೇದ್ದಕ್ಕೆ ಕರೆ ಮಾಡಿ ಮಾತನಾಡಿದರು. ಅದಕ್ಕೆ ಆರೋಪಿಯು ಫಿರ್ಯಾದಿಗೆ ತಾನು ತಾಲೂಕು ಪಂಚಾಯತಿ ಕಚೇರಿಯಲ್ಲಿದ್ದು ಅಲ್ಲಿಗೆ ಬರುವಂತೆ ತಿಳಿಸಿದರು. ಅದರಂತೆ ನಾವೆಲ್ಲರೂ ಸೇರಿ ತಾಲೂಕು ಪಂಚಾಯತಿ ಕಚೇರಿ ಕಡೆಗೆ ತೆರಳಿದೆವು . ಗಿಬ್ಸ್ ಹೈಸ್ಕೂಲ್ ಹತ್ತಿರ ತಲುಪಿದಾಗ ನಮ್ಮ ವಾಹನಗಳನ್ನು ಅಲ್ಲಿಯೇ ನಿಲ್ಲಿಸಿದೆವು. ಆಗ ಸಮಯ ಸುಮಾರು 18.15 ಗಂಟೆಯಾಗಿತ್ತು. ನಂತರ ನಾನು ಫಿರ್ಯಾದಿ ಹಾಗೂ ಪಂಚ–1 ರವರಿಗೆ ವಾಹನದಿಂದ ಕೆಳಗೆ ಇಳಿಸಿ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಕೊಟ್ಟ ಸಲಹೆ ಸೂಚನೆಗಳನ್ನು ಮತ್ತೊಮ್ಮೆ ತಿಳಿಸಿ ಹೇಳಿದೆ. ಫಿರ್ಯಾದುದಾರರಿಗೆ ಆರೋಪಿ ಹತ್ತಿರ ಹೋಗುವ ಮೊದಲು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಕೊಟ್ಟಿದ್ದ ಡಿಜಿಟಲ್ ವಾಯ್ಸ್ ರೆಕಾರ್ಡರ್ ನ್ನು ಚಾಲು ಮಾಡಿಕೊಂಡು ಹೋಗಲು ತಿಳಿಸಿದೆ. ಫಿರ್ಯಾದುದಾರ ಹಾಗೂ ಪಂಚ–1 ರವರು ತಾಲೂಕು ಪಂಚಾಯತಿ ಕಚೇರಿ ಕಡೆಗೆ ಹೊರಟರು. ಅವರನ್ನು ಹಿಂಬಾಲಿಸಿ ನಾನು , ಆರಕ್ಷಕ ನಿರೀಕ್ಷಕರು , ಪಂಚ–2 ಹಾಗೂ

ಲೋಕಾಯುಕ್ತ ಸಿಬ್ಬಂದಿಯವರು ಹೊರಟೆವು. 18.30 ಗಂಟೆಗೆ ಫಿರ್ಯಾದುದಾರ ಮತ್ತು ಪಂಚ–1 ರವರು ತಾಲೂಕು ಪಂಚಾಯತಿ ಕಚೇರಿ ಹತ್ತಿರ ಬಂದು ಕಚೇರಿಯ ಒಳಗೆ ಹೋದರು. ನಾನು ಮತ್ತು ಪಂಚ–2 ರವರು ಸದರಿ ತಾಲೂಕು ಪಂಚಾಯತಿ ಕಚೇರಿಯ ಮುಂದುಗಡೆ ಇರುವ ಟಾರ್ ರಸ್ತೆಯ ಮೇಲೆ ನಿಂತುಕೊಂಡೆವು . ಸದರಿ ರಸ್ತೆಯ ಆಚೆ ಇರುವ A–1 ಜೆರಾಕ್ಸ್ ಅಂಗಡಿ ಹತ್ತಿರ ದೋಸಾ–12, 8, 10 ಮತ್ತು ತಾಲೂಕು ಪಂಚಾಯತಿ ಕಚೇರಿಯ ಬಲಬದಿ ಕಂಪೌಂಡ್ ಹತ್ತಿರ ದೋಸಾ–6, 7, 9, 11 ರವರು ನಿಂತುಕೊಂಡರು. ಅಲ್ಲದೇ ಫಿರ್ಯಾದಿಯ ಸನ್ನೆಗಾಗಿ ಕಾಯುತ್ತಾ ನಿಂತೆವು . ನಂತರ ಫಿರ್ಯಾದಿ , ಪಂಚ–1 ಹಾಗೂ ಇನ್ನೊಬ್ಬ ವ್ಯಕ್ತಿಯು ತಾಲೂಕು ಪಂಚಾಯತಿ ಕಚೇರಿಯಿಂದ ಹೊರಗೆ ಬಂದು ಕಚೇರಿಯ ಕಂಪೌಂಡ್ ನಲ್ಲಿರುವ ದ್ವಿಚಕ್ರ ವಾಹನ ನಿಲ್ಲಿಸುವ ಸ್ಟ್ಯಾಂಡ್ ಹತ್ತಿರ ಬಂದು ಏನೋ ಮಾತನಾಡಿ ಅವರ ಪೈಕಿ ಮೇಲೆ ಹೇಳಿದ ವ್ಯಕ್ತಿಯು ತಮ್ಮ ಹಿರೋ ಹೊಂಡಾ ಸಿಡಿ ಡಿಲಕ್ಸ್ ಮೋಟಾರ್ ಸೈಕಲ್ ಸಂ. ಕೆಎ–47/ಕೆ–5710 ನೇದ್ದರ ಮೇಲೆ ಹೊರಟು ಹೋದ . ನಂತರ ಫಿರ್ಯಾದುದಾರರು ತಮ್ಮ ಪ್ಯಾಂಟಿನ ಕಿಸೆಯಿಂದ ಕರವಸ್ತ್ರವನ್ನು ಜಾಡಿಸಿ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿದರು. ಕೂಡಲೇ ನಾನು , ಆರಕ್ಷಕ ನಿರೀಕ್ಷಕರು , ಪಂಚ–2 ಹಾಗೂ ಸಿಬ್ಬಂದಿಯವರು ಸೇರಿ ಸದರಿ ಆಸಾಮಿಯನ್ನು ಬೆನ್ನಟ್ಟಿ ಹೋದೆವು . ಆಗ ಫಿರ್ಯಾದುದಾರರು ನಮ್ಮ ಜೊತೆಗೆ ಇದ್ದು ಸದರಿ ಆಸಾಮಿಯೇ ಆರೋಪಿ ಗಣೇಶ ನಾಯ್ಕ ಇರುವುದಾಗಿ ತಿಳಿಸಿದ. ನಂತರ ನಾವೆಲ್ಲರೂ ಸೇರಿ ಆರೋಪಿಯನ್ನು ಕುಮಟಾ ಶಹರದಲ್ಲೆಲ್ಲಾ ಬೆನ್ನಟ್ಟಿ ಹೋಗಿ ಕೊನೆಗೆ ಕುಮಟಾ ಶಹರದ ಹೆರವಟ್ಟಾಧ ಶ್ರೀ ಶಾಂತಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಅಡ್ಡ ಹಾಕಿ ತಡೆದೆವು . ಅದೇ ಸಮಯದಲ್ಲಿ ಆರೋಪಿಯು ತನ್ನ ಪ್ಯಾಂಟಿನ ಬಲ ಕಿಸೆಯಲ್ಲಿ ಇದ್ದ ಲಂಚದ ಹಣವನ್ನು ತೆಗೆದು ಪಕ್ಕದಲ್ಲಿದ್ದ ಕಂಪೌಂಡ್ ನ ಗಿಡಗಂಟಿಗಳ ಮಧ್ಯೆ ಬಿಸಾಡಿದ . ತಕ್ಷಣ ನಾನು ನನ್ನ ಸಿಬ್ಬಂದಿ ದೋಸಾ–7, 9 ರವರಿಗೆ ಆರೋಪಿಯ ಎರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುವಂತೆ ತಿಳಿಸಿದೆ . ಅದೇ ಸಮಯಕ್ಕೆ ನಮ್ಮೊಂದಿಗೆ ಇದ್ದ ಫಿರ್ಯಾದುದಾರ ನಾವು ಹಿಡಿದ ಆಸಾಮಿಯನ್ನು ತೋರಿಸಿ ಇವರೇ ಶ್ರೀ ಗಣೇಶ ನಾಯ್ಕ , ಸಹಾಯಕ ನಿರ್ದೇಶಕರು , ಅಕ್ಷರ ದಾಸೋಹ, ತಾಲೂಕು ಪಂಚಾಯತಿ ಕುಮಟಾ ಎಂದು ತಿಳಿಸಿದ. ತಾನು ಫಿರ್ಯಾದಿಯಲ್ಲಿ ಹೇಳಿದ ಲಂಚದ ಹಣಕ್ಕೆ ಒತ್ತಾಯಿಸಿ ಇಂದು ತನ್ನ

ಕಡೆಯಿಂದ ರೂ. 3000/- ಲಂಚದ ಹಣವನ್ನು ಪಡೆದು ತನ್ನ ಹಿರೋ ಹೊಂಡಾ ಸಿಡಿ ಡಿಲಕ್ಸ್ ಮೋಟಾರ್ ಸೈಕಲ್ ಸಂ. ಕೆಎ-47/ಕೆ-5710 ನೇದ್ದರ ಮೇಲೆ ಓಡಿ ಹೋಗಿರುವುದಾಗಿ ತಿಳಿಸಿದ. ನಂತರ ನಾನು ಆರೋಪಿಗೆ ನನ್ನ ಹೆಸರು ವಿಳಾಸ ಹೇಳಿ ಗುರುತಿನ ಚೀಟಿ ತೋರಿಸಿ ಆರೋಪಿಯ ಹೆಸರು ವಿಳಾಸ ಕೇಳಿದಾಗ ಅವರು ತನ್ನ ಹೆಸರು ಗಣೇಶ ಅನಂತ ನಾಯ್ಕ , ಸಹಾಯಕ ನಿರ್ದೇಶಕರು ಅಕ್ಷರ ದಾಸೋಹ ತಾಲೂಕು ಪಂಚಾಯತಿ ಕಚೇರಿ ಕುಮಟಾ ಎಂದು ತಿಳಿಸಿದ . ಸ್ಥಳದಲ್ಲಿಯೇ ನಾನು ಸದರಿ ಆರೋಪಿಯನ್ನು ದಸ್ತಗಿರಿ ಮಾಡಿ ನನ್ನ ವಶಕ್ಕೆ ತೆಗೆದುಕೊಂಡೆ . ನಾನು ಈಗ ಆ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಕಟಕಟೆಯಲ್ಲಿರುವ ಆರೋಪಿ ಅದೇ ಆರೋಪಿಯಾಗಿರುತ್ತಾನೆ. ನಂತರ ನಾನು ಆರೋಪಿ ಬಿಸಾಡಿದ ಲಂಚದ ಹಣವನ್ನು ಪಂಚ-1 ರವರಿಂದ ತೆಗೆದು ಹಾಜರುಪಡಿಸಿಕೊಂಡು ಅದನ್ನು ಎಣಿಸಿ ಪರಿಶೀಲಿಸಿ ನೋಟುಗಳ ಸಂಖ್ಯೆಗಳನ್ನು ಹೇಳಲು ತಿಳಿಸಿದೆ. ಸದರಿಯವರು ಸದರಿ ನೋಟುಗಳನ್ನು ಪರಿಶೀಲಿಸಿ ಎಣಿಸಿ ನೋಡಿದಾಗ ರೂ. 1000/- ದ ಎರಡು ನೋಟು ಹಾಗೂ ರೂ. 500/- ರ ಎರಡು ನೋಟುಗಳು ಒಟ್ಟು ರೂ. 3000/- ಇರುವುದಾಗಿ ತಿಳಿಸಿದ. ಸದರಿ ನೋಟುಗಳ ಸಂಖ್ಯೆಗಳನ್ನು ಓದಿ ಹೇಳಿದ. ಅವು 1) 1CM747593 (2) 1CM747594 (3) 5EQ406727 (4) 4DT745669 ಇರುವುದಾಗಿ ತಿಳಿಸಿದರು. ಅಲ್ಲದೇ ಸದರಿ ಪಂಚರು ಈ ನೋಟುಗಳು ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ಸಂಖ್ಯೆಗಳೇ ಆಗಿರುವುದಾಗಿ ತಿಳಿಸಿದರು. ನಾನು ಅವುಗಳನ್ನು ಒಂದು ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಅರಗು ಹಾಕಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ನಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 6 ಎಂದು ಗುರುತಿಸಿದೆ . ಜಪ್ತು ಮಾಡಿದ ಆ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದಲ್ಲಿ ಮೌಲ್ಯಯುತ ಪೆಟ್ಟಿಗೆಯಿಂದ ಹೊರತೆಗೆದು ತೋರಿಸಿದ ಲಕೋಟೆಯಲ್ಲಿ ಆಗ ಹಣವನ್ನು ಜಪ್ತು ಮಾಡಿರುತ್ತೇನೆ. ಆ ಲಕೋಟೆಯಿಂದ ತೆಗೆದು ತೋರಿಸಿದ ರೂ. 1000/- ದ ಎರಡು ನೋಟು ಮತ್ತು ರೂ. 500/- ರ ಎರಡು ನೋಟು ಆಗ ಜಪ್ತು ಮಾಡಿದ ಹಣ ಆಗಿರುತ್ತದೆ . ಆ ಹಣ ಮತ್ತು ಲಕೋಟೆಯನ್ನು ಒಟ್ಟಾಗಿ ಮು.ಮಾ. 1 ಎಂದು ಗುರುತಿಸಲಾಗಿದೆ. ಆ

ಲಕೋಟೆ ಮೇಲೆ ನನ್ನ ರುಜು ಇದೆ . ಸಾಕ್ಷಿಯ ರುಜುವನ್ನು ಮು.ಮಾ. 1(ಸಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಆ ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆಸಿರುತ್ತೇನೆ. ಈಗ ಆ ಛಾಯಾಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡಿದ ನಿ.ಪಿ. 19, 20, 21 ಮತ್ತು 37 ಎಂದು ಈಗಾಗಲೇ ಗುರುತಿಸಿರುವ ಛಾಯಾಚಿತ್ರಗಳಲ್ಲಿ ಆ ಸ್ಥಳದಲ್ಲಿ ಆಗ ತೆಗೆದ ಛಾಯಾಚಿತ್ರಗಳು ಆಗಿವೆ ಎಂದು ಸಾಕ್ಷಿ ಗುರುತಿಸಿದ್ದಾರೆ. ನಂತರ ನಾನು ಫಿರ್ಯಾದುದಾರರಿಗೆ ಏನು ನಡೆಯಿತು ಎಂದು ಮತ್ತೊಮ್ಮೆ ವಿಚಾರಿಸಿದಾಗ ಫಿರ್ಯಾದುದಾರರು ತಾನು ಹಾಗೂ ಪಂಚ–1 ರವರು ಕುಮಟಾ ಗಿಬ್ಸ್ ಹೈಸ್ಕೂಲ್ ವೃತ್ತದಿಂದ ಕಾಲ್ನಡಿಗೆಯಲ್ಲಿ ಹೊರಟು ತಾಲೂಕು ಪಂಚಾಯತಿ ಕಚೇರಿಗೆ ಹೋಗಿ ಸದರಿ ಕಚೇರಿಯ ಒಳಗೆ ಹೋಗಿ ಆ ಸಮಯದಲ್ಲಿ ಆರೋಪಿ ತಮ್ಮ ಮೇಜಿನ ಹತ್ತಿರ ಇದ್ದು ಪಂಚ–1 ರವರಿಗೆ ಅವರೇ ಆರೋಪಿ ಎಂದು ತೋರಿಸಿದರು. ನಂತರ ತಾನು ಆರೋಪಿಯ ಹತ್ತಿರ ಹೋಗಿದ್ದು ಪಂಚ–1 ರವರು ತನ್ನನ್ನು ಹಿಂಬಾಲಿಸಿ ತನ್ನ ಹಿಂದುಗಡೆ ಆರೋಪಿಯ ಕೋಣೆಯ ಬಾಗಿಲ ಬಳಿ ನಿಂತುಕೊಂಡರು. ತಾನು ತಮ್ಮ ಕೆಲಸದ ಬಗ್ಗೆ ಆರೋಪಿಗೆ ಕೇಳಿದಾಗ ಆರೋಪಿಯು ಹಿಂದೆ ಹೇಳಿದಂತೆ ಒಟ್ಟು ಹಣವನ್ನು ತಂದ ಬಗ್ಗೆ ಕೇಳಿದರು. ಅದರಂತೆ ತಾನು ತನ್ನ ಜೇಬಿನಿಂದ ಫಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ತೆಗೆದುಕೊಡಲು ಹೋದಾಗ ಅವರು ತನ್ನನ್ನು ಕರೆದುಕೊಂಡು ಕಚೇರಿಯಿಂದ ಹೊರಗೆ ಬಂದು ಕಚೇರಿ ಕಂಪೌಂಡ್ ನಲ್ಲಿರುವ ದ್ವಿಚಕ್ರ ವಾಹನ ನಿಲ್ಲಿಸುವ ಸ್ಟ್ಯಾಂಡ್ ಬಳಿ ಬಂದು ತನ್ನ ಬಳಿಯಿಂದ ರೂ. 3000/– ಲಂಚದ ಹಣವನ್ನು ಪಡೆದು ತಮ್ಮ ಎರಡೂ ಕೈಗಳಿಂದ ಎಣಿಸಿ ತಮ್ಮ ಪ್ಯಾಂಟಿನ ಬಲ ಕಿಸೆಯಲ್ಲಿ ಇಟ್ಟುಕೊಂಡು ತಮ್ಮ ಹಿರೋ ಹೊಂಡಾ ಮೋಟಾರ್ ಸೈಕಲ್ ಸಂ. ಕೆಎ–47/ಕೆ–5710 ನೇದ್ದರ ಮೇಲೆ ಹೊರಟು ಹೋದರು . ಆ ಸಮಯದಲ್ಲಿ ಪಂಚ–1 ರವರು ತನ್ನ ಹಿಂದುಗಡೆ ನಿಂತುಕೊಂಡಿದ್ದರು. ನಂತರ ತಾನು ಕೂಡಲೇ ತನ್ನ ಪ್ಯಾಂಟಿನ ಕಿಸೆಯಿಂದ ಕರವಸ್ತ್ರವನ್ನು ತೆಗೆದು ಜಾಡಿಸಿ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿರುತ್ತೇನೆ ಎಂದು ಫಿರ್ಯಾದಿ ತಿಳಿಸಿದ ಹಾಗೂ ಆರೋಪಿಯನ್ನು ಹಿಡಿಯಲು ತಮ್ಮೊಂದಿಗೆ ಬಂದಿರುವುದಾಗಿ ಹೇಳಿದ. ನಂತರ ನಾನು ಪಂಚ–1 ರವರನ್ನು ವಿಚಾರಿಸಿದಾಗ ಅವರು ಫಿರ್ಯಾದುದಾರರು ಹೇಳಿದ ಸದರಿ ಘಟನೆಗೆ ಅನುಸರಿಸಿ ಹೇಳಿದ. ಆರೋಪಿಯನ್ನು ದಸ್ತಗಿರಿ ಮಾಡಿದ ಸ್ಥಳವು ಇಕ್ಕಟ್ಟಾದ ಸಾರ್ವಜನಿಕ ಸ್ಥಳವಾಗಿತ್ತು. ಸದರಿ ಸ್ಥಳದಲ್ಲಿ ವಿದ್ಯುತ್ ಬೆಳಕಿನ ಅಭಾವ ಆಗಿದ್ದರಿಂದ

ಸದರಿ ಸ್ಥಳದಲ್ಲಿ ಪಂಚನಾಮೆ ಮುಂದುವರಿಸುವುದು ಅಸಾಧ್ಯವಾದ ಕಾರಣ ಆರೋಪಿಯ ಎರಡೂ ಕೈಗಳನ್ನು ದೋಸಾ–7 ಹಾಗೂ ದೋಸಾ–9 ರವರಿಗೆ ಗಟ್ಟಿಯಾಗಿ ಹಿಡಿದುಕೊಳ್ಳುವಂತೆ ಹೇಳಿದೆ . ಅದರಂತೆ ಅವರು ಆರೋಪಿಯ ಎರಡೂ ಕೈಗಳನ್ನು ಹಿಡಿದುಕೊಂಡರು. ಅವರನ್ನು ಪಂಚರ ಸಮಕ್ಷಮ ಇಲಾಖಾ ವಾಹನದಲ್ಲಿ ಕುಳ್ಳಿರಿಸಿ ಕುಮಟಾ ಪ್ರವಾಸಿ ಮಂದಿರಕ್ಕೆ ಕರೆ ತಂದೆ . ಅಲ್ಲದೇ ಆರೋಪಿ ಚಲಾಯಿಸಿಕೊಂಡು ಹಿರೋ ಹೊಂಡಾ ಮೋಟಾರ್ ಸೈಕಲ್ ಅನ್ನು ಸಹ ದೋಸಾ–10 ರವರು ಚಲಾಯಿಸಿಕೊಂಡು ಸದರಿ ಪ್ರವಾಸಿ ಮಂದಿರಕ್ಕೆ ನಮ್ಮೊಂದಿಗೆ ಬಂದರು. ನಂತರ ನಾನು ಸೂಚಿಸಿದ ಮೇರೆಗೆ ದೋಸಾ–11 ರವರಿಂದ ಎರಡು ಪಿಂಗಾಣಿ ಬಟ್ಟಲುಗಳನ್ನು ಸ್ವಚ್ಛವಾಗಿ ತೊಳೆದು ಅವುಗಳಲ್ಲಿ ಭಟ್ಟಿ ಇಳಿಸಿದ ನೀರನ್ನು ಹಾಕಿ ಅವುಗಳಲ್ಲಿ ಒಂದೊಂದು ಚಮಚ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಹಾಕಿ ದ್ರಾವಣ ತಯಾರಿಸಿದೆ . ಅದು ಬಣ್ಣ ರಹಿವಾಗಿತ್ತು. ಈ ದ್ರಾವಣದಲ್ಲಿ ಆರೋಪಿಯ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಅದ್ದಿ ತೊಳೆಯಲು ಸೂಚಿಸಿದೆ. ಅದರಂತೆ ಅವರು ತಮ್ಮ ಬಲಗೈ ಬೆರಳುಗಳನ್ನು ಒಂದು ಬಟ್ಟಲಿನ ದ್ರಾವಣದಲ್ಲಿ ಅದ್ದಿ ತೊಳೆದಾಗ ಸದರಿ ಬಣ್ಣ ರಹಿತ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ಅದನ್ನು ಎರಡು ಪ್ರತ್ಯೇಕ ಸಣ್ಣ ಗಾಜಿನ ಕ್ವಾರ್ಟರ್ ಬಾಟಲಿಯಲ್ಲಿ ಹಾಕಿ ಮುಚ್ಚಳ ಬಂದ್ ಮಾಡಿ ಅರಗು ಮೊಹರು ಹಾಕಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ನಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 7 ಮತು 7(ಎ) ಎಂದು ಗುರುತಿಸಿದೆ . ನಂತರ ಆರೋಪಿಯ ಎಡಗೈ ಬೆರಳುಗಳನ್ನು ಇನ್ನೊಂದು ಬಟ್ಟಲಿನಲ್ಲಿ ದ್ರಾವಣದಲ್ಲಿ ಅದ್ದಿ ತೊಳೆದಾಗ ಸದರಿ ಬಣ್ಣ ರಹಿತ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ಅದನ್ನು ಎರಡು ಪ್ರತ್ಯೇಕ ಸಣ್ಣ ಗಾಜಿನ ಕ್ವಾರ್ಟರ್ ಬಾಟಲಿಯಲ್ಲಿ ಹಾಕಿ ಮುಚ್ಚಳ ಬಂದ್ ಮಾಡಿ ಅರಗು ಮೊಹರು ಹಾಕಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ನಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 8 ಮತು 8(ಎ) ಎಂದು ಗುರುತಿಸಿದೆ . ನಂತರ ನಾನು ಆರೋಪಿಯು ಲಂಚದ ಹಣವನ್ನು ತಮ್ಮ ಪ್ಯಾಂಟಿನ ಬಲಕಿಸೆಯಲ್ಲಿ ಇಟ್ಟುಕೊಂಡಿದ್ದರಿಂದ ಅವರಿಗೆ ಅವರ ತಮ್ಮನಾದ ಶ್ರೀ ವಿಠ್ಠು ನಾಯ್ಕರವರಿಂದ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ ಅವರು

ಧರಿಸಿರುವ ಪ್ಯಾಂಟ್ ಅನ್ನು ಪಡೆದು ಸಿಬ್ಬಂದಿಯಾದ ದೋಸಾ–11 ರವರ ಕಡೆಯಿಂದ ಒಂದು ಪಿಂಗಾಣಿ ಬಟ್ಟಲಿನಲ್ಲಿ ಭಟ್ಟಿ ಇಳಿಸಿದ ನೀರನ್ನು ಹಾಕಿ ಅದಕ್ಕೆ ಒಂದು ಚಮಚ ಸೋಡಿಯಂ ಕಾರ್ಬೋರ್ನೇಟ್ ಪುಡಿಯನ್ನು ಹಾಕಿಸಿ ದ್ರಾವಣ ತಯಾರಿಸಿದೆ. ಸದರಿ ದ್ರಾವಣವು ಬಣ್ಣ ರಹಿತವಾಗಿದ್ದು ಸದರಿ ದ್ರಾವಣದಲ್ಲಿ ಮೇಲೆ ಹೇಳಿದ ಪ್ಯಾಂಟಿನ ಬಲಕಿಸೆಯ ಒಳಭಾಗವನ್ನು ಸದರಿ ಬಣ್ಣ ರಹಿತ ದ್ರಾವಣದಲ್ಲಿ ಅದ್ದಿ ತೊಳೆದು ಅದು ಸ್ವಲ್ಪ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು. ಸದರಿ ದ್ರಾವಣವನ್ನು ಒಂದು ಸಣ್ಣ ಗಾಜಿನ ಕ್ವಾರ್ಟರ್ ಬಾಟಲಿಯಲ್ಲಿ ಹಾಕಿ ಮುಚ್ಚಳ ಬಂದ್ ಮಾಡಿ ಅರಗು ಮೊಹರು ಹಾಕಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ನಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 9 ಎಂದು ಗುರುತಿಸಿದೆ . ಸದರಿ ಪ್ಯಾಂಟ್ ಅನ್ನು ಒಂದು ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಅರಗು A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ನಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 9(ಎ) ಎಂದು ಗುರುತಿಸಿದೆ . ನಂತರ ನಾನು ಆರೋಪಿಗೆ ಫಿರ್ಯಾದಿಯಿಂದ ಪಡೆದ ಲಂಚದ ಹಣದ ಬಗ್ಗೆ ತಮ್ಮದೇನಾದರೂ ವಿವರಣೆ ಇದ್ದಲ್ಲಿ ಕೊಡಲು ತಿಳಿಸಿದೆ . ಅದರಂತೆ ಆರೋಪಿ ತಮ್ಮ ಲಿಖಿತ ಹೇಳಿಕೆಯನ್ನು ಕನ್ನಡದಲ್ಲಿ ಬರೆದುಕೊಟ್ಟರು. ಅದರಲ್ಲಿ ಆರೋಪಿ ತಾನು ಸಹಾಯಕ ನಿರ್ದೇಶಕನಾಗಿ ತಾಲೂಕು ಪಂಚಾಯತಿ ಕುಮಟಾದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ, ಕಳೆದ 4–5 ದಿನಗಳಿಂದ ಆಹಾರ ಸಾಗಾಣಿಕೆದಾರರು ತನಗೆ ತಕ್ಷಣ ಕ್ಷೀರಭಾಗ್ಯ ಹಾಲಿನ ಪುಡಿ ಸ್ವೀಕೃತಿ ರಸೀದಿಯನ್ನು ಕಳುಹಿಸಲು ಪೀಡಿಸುತ್ತಿದ್ದರು, ಈ ಯೋಜನೆ ತೀವ್ರವಾಗಿ ನಡೆಯುವುದಕ್ಕಾಗಿ ಸ್ವೀಕೃತಿ ರಸೀದಿಗಳನ್ನು ಕೆ ಎಂ ಎಫ್ ಧಾರವಾಡಕ್ಕೆ ಕಳುಹಿಸುವುದು ಅನಿವಾರ್ಯ ಇರುವುದರಿಂದ ಸದರಿಯವರ ಕಾಗದ ಪತ್ರಗಳನ್ನು ವಿವಿಧ ಕಚೇರಿಗೆ ಕಳುಹಿಸಲು ನಾನೇ ಪರಿಶೀಲಿಸಿ 3560 ಕೆ ಜಿ ಹಾಲಿನ ಪುಡಿ ಶಾಲೆಗಳಿಗೆ ವಿತರಿಸುವ ಬದಲು ಕೇವಲ 2557 ಕೆ ಜಿ ಹಾಲಿನ ಪುಡಿಯನ್ನು ಮಾತ್ರ ಶಾಲೆಗಳಿಗೆ ವಿತರಿಸಿದ ಬಗ್ಗೆ ಸ್ವೀಕೃತಿಯನ್ನು ಜಿಲ್ಲಾ DDPI ಕಾರವಾರರವರಿಗೆ , ಜಿಲ್ಲಾ ಶಿಕ್ಷಣಾಧಿಕಾರಿಗೆ ಹಾಗೂ ಕೆ ಎಂ ಎಫ್ ಧಾರವಾಡದ ಎ. ಎಂ. ಬಡಿಗೇರ್ ರವರಿಗೆ ಮೇಲ್ ಮುಖಾಂತರ ಕಳುಹಿಸಿರುತ್ತೇನೆ, ಈ ಯೋಜನೆಯಲ್ಲಿ ಸಾಗಾಣಿಕೆದಾರ ಎಂದು ಶ್ರೀ ರಾಮಾ ನಾಯ್ಕರವರು

ಅಧಿಕೃತ ಆಧಾರ ಕೂಡಾ ಈ ಕಚೇರಿಗೆ ಬರುವ ಪೂರ್ವದಲ್ಲಿ ತನ್ನ ಕಚೇರಿಗೆ ಇಂದು 16.09.2013 ರ ಮಧ್ಯಾಹ್ನ ತಾನು ಕೂಜಳ್ಳಿ ಎಚ್ ಪಿ ಎಸ್ ಶಾಲೆಯಿಂದ ಹಿಂದಿರುಗುವಾಗ ಅಂದರೆ ಸುಮಾರು 6.15 ಗಂಟೆ ಹೊತ್ತಿಗೆ ಒತ್ತಾಯದಿಂದ ತನ್ನ ಗಾಡಿಯ ಮೇಲೆ ಸಾಗಾಣಿಕೆದಾರನು ರೂಪಾಯಿ ಸುರುಳಿಯನ್ನು ಬೈಕ್ ನ ಸೀಟಿನ ಕವರಿನಲ್ಲಿ ಇಟ್ಟು ಹೋಗಿರುತ್ತಾನೆ, ಇದನ್ನು ಏಕೆ ಇಟ್ಟಿರುವೆ ಎಂದು ಕೇಳಿದರೂ ತಿಳಿಸದೇ ಹೋಗಿರುತ್ತಾನೆ , ಸದರಿ ರಾಮಾ ನಾಯ್ಕರವರು ಈ ಹಿಂದೆ ತನ್ನಿಂದ ಸಾಲವಾಗಿ ಪಡೆದ ಹಣವಾಗಿರಬಹುದು ಎಂದು ತಿಳಿದು ಮುಂದಕ್ಕೆ ಮನೆಗೆ ಹೋಗುವಷ್ಟರಲ್ಲಿ ಇಬ್ಬರು ನನ್ನನ್ನು ಅಡ್ಡಗಟ್ಟಿ ಬೈಕ್ ನಿಲ್ಲಿಸಿ ನೇರವಾಗಿ ಐ ಬಿ ಗೆ ಕರೆ ತಂದಿರುತ್ತಾರೆ, ಮುಂದಿನ ವಿಚಾರಗಳನ್ನು ತಮ್ಮಲ್ಲಿಗೆ ಕಾಗದಪತ್ರಗಳೊಂದಿಗೆ ಸಲ್ಲಿಸುತ್ತೇನೆ, ಸದರಿ ರಾಮಾ ನಾಯ್ಕರವರಿಗೆ ಕಳೆದ ಸಾಲಿನಿಂದ ಆಹಾರ ಸಾಗಾಣಿಕೆಯಲ್ಲಿ ಯಾವುದೇ ರಸೀದಿಗಳನ್ನು ಸಮರ್ಪಕವಾಗಿ ನೀಡದಿರುವ ಬಗ್ಗೆ ವಿವರವಾದ ನೋಟಿಸನ್ನು ಕಾಲ ಕಾಲಕ್ಕೆ ನೀಡಲಾಗಿದೆ. ಸದರಿಯವರು ಈ ಬಾರಿ ಹಾಲಿನ ವಿತರಣೆ ರಸೀದಿಗಳನ್ನು ತಾಲೂಕು ಪಂಚಾಯತಿ ಕಚೇರಿಗೆ ನೀಡದೇ ನನ್ನ ಟೇಬಲ್ ಮೇಲೆ ಇಟ್ಟು ಹೋಗಿರುತ್ತಾನೆ, ಅವರು ಸಾಗಾಣಿಕೆದಾರ ಎನ್ನುವ ಬಗ್ಗೆ ಅಧಿಕೃತ ಆದೇಶವು ಬಂದಿರುವುದಿಲ್ಲ, ಆದರೂ ಕೆ ಎಂ ಎಫ್ ನೋಡಲ್ ಆಫೀಸರ್ ತಿಳಿಸಿದಂತೆ ಅವರು ನೀಡಿದ ರಸೀದಿಗಳನ್ನು ಒಂದೊಂದಾಗಿ ಪರಿಶೀಲಿಸಿ ಜಿಲ್ಲಾ ಕಚೇರಿಗೆ ಕೆ ಎಂ ಎಫ್ ನೋಡಲ್ ಆಫೀಸರ್ ಗೆ ವಿವರವಾದ ಮೇಲ್ ಮಾಡಿರುತ್ತೇನೆ, ಸದರಿಯವರು ವಿತರಿಸಿರುವ ರಸೀದಿಗಳಲ್ಲಿ ಶೇಕಡಾ 30 ರಷ್ಟು ರಸೀದಿಗಳು ಸಮರ್ಪಕವಾಗಿಲ್ಲದಿರುವುದರಿಂದ ಯಾವ ಕಚೇರಿಗೆ ವರದಿ ಮಾಡಬೇಕು ಎನ್ನುವ ಬಗ್ಗೆ ತಾಲೂಕು ಕೆ ಎಂ ಎಫ್ ರವರಿಗೆ ಫೋನ್ ಮಾಡಿದರೂ ಸದರಿಯವರು ಸರಿಯಾಗಿ ಉತ್ತರಿಸಿ address ತಿಳಿಸಿರುವುದಿಲ್ಲ, ಕಾರಣ ಎಲ್ಲಾ ಮಾಹಿತಿಗಳನ್ನು ಜಿಲ್ಲಾ ಕಚೇರಿಗೆ ಕಳುಹಿಸಿರುತ್ತೇನೆ, ಶ್ರೀ ರಾಮಾ ನಾಯ್ಕರವರು ಆರ್ಥಿಕವಾಗಿ ಹಲವಾರು ಬಾರಿ ನನ್ನಿಂದ ಸಹಾಯ ಪಡೆದು ಇ.ಎಂ.ಡಿ. ಹಣವನ್ನು ನೀಡುವಾಗ ಸಹ ಸಾಲವನ್ನು ಪಡೆದಿದ್ದು ಅದೆ , ಸದರಿಯವರ ಕಾರ್ಯಕ್ಷಮತೆ ಸರಿಯಾಗಿ ಇಲ್ಲದಿರುವುದರಿಂದ ಈ ಬಾರಿಯ ಆಹಾರ ಸಾಗಾಣಿಕೆಯನ್ನು ಸದರಿಯವರಿಗೆ ನೀಡಿರುವುದಿಲ್ಲ, ಸದರಿಯವರ ಸಾಗಾಣಿಕೆದಾರರ ಕಾಗದಪತ್ರಗಳು ಯಾವುದೂ ಸಮರ್ಪಕವಾಗಿಲ್ಲದಿರುವುದರಿಂದ ಪರಿಶೀಲನೆಗೆ ವಿಶೇಷ ವೇಳೆಯನ್ನು ಪಡೆದು

ಯೋಜನೆ ಅನುಷ್ಠಾನಕ್ಕೆ ಧಕ್ಕೆ ಬರಬಾರದು ಎನ್ನುವ ದೃಷ್ಟಿಯಿಂದ ಮೇಲಾಧಿಕಾರಿಯವರಿಂದ ತಕ್ಷಣ ಕಳುಹಿಸಬೇಕು ಎನ್ನುವ ದೃಷ್ಟಿಯಿಂದ ಆಗದೇ ಸದರಿಯವರು ನೀಡಿದ ರಸೀದಿಗಳನ್ನು ಪರಿಶೀಲನೆಗೆ ಕಳುಹಿಸಲಾಗಿದೆ, ಬಾಕಿ ವಿವರಗಳನ್ನು ದಾಖಲೆಗಳೊಂದಿಗೆ ಹಾಜರುಪಡಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತಾರೆ. ಆರೋಪಿ ನೀಡಿದ ಆ ಲಿಖಿತ ಹೇಳಿಕೆಯ ಮೇಲೆ ಪಂಚರಾದ ದೋಸಾ2 ಮತ್ತು 3 ಹಾಗೂ ನಾನು ರುಜು ಮಾಡಿರುತ್ತೇನೆ. ಸದರಿ ಲಿಖಿತ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅದನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಈಗಾಗಲೇ ಆ ಲಿಖಿತ ಹೇಳಿಕೆಯನ್ನು ನಿ.ಪಿ. 5 ಎಂದು ಗುರುತಿಸಲಾಗಿದೆ. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 5(ಡಿ) ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯನ್ನು ಫಿರ್ಯಾದಿಯವರಿಗೆ ಓದಿ ಹೇಳಿದ್ದು ಅವರು ಸದರಿ ಹೇಳಿಕೆಯಲ್ಲಿ ನಮೂದಿಸಿರುವ ವಿಷಯವು ಸುಳ್ಳು ಇರುವುದಾಗಿ ಹೇಳಿದರು. ಸದರಿ ಹೇಳಿಕೆಯನ್ನು ನಾನು ನನ್ನ ವಶಕ್ಕೆ ಪಡೆದುಕೊಂಡೆ . ನಂತರ ಆರೋಪಿಗೆ ಉದ್ದೇಶಿಸಿ ಫಿರ್ಯಾದಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಲು ಕೇಳಿದಾಗ ಆರೋಪಿಯು ಸದರಿ ಕಡತವು ತಮ್ಮ ಕಚೇರಿಯಲ್ಲಿಯೇ ಇರುವುದಾಗಿ ಸುಳ್ಳು ಹೇಳಿ ನಂತರ ತನ್ನ ಹಿರೋ ಹೊಂಡಾ ಮೋಟಾರ್ ಸೈಕಲ್ ಸಂ. ಕೆಎ–47/ಕೆ–5710 ನೇದ್ದರ ಸೈಡ್ ಬಾಕ್ಸ್ ನಲ್ಲಿ ಇಟ್ಟಿರುವುದಾಗಿ ತಿಳಿಸಿದ. ನಾನು ಪಂಚರ ಸಮಕ್ಷಮ ಸದರಿ ಕಡತವನ್ನು ವಶಕ್ಕೆ ತೆಗೆದುಕೊಂಡು ಪರಿಶೀಲಿಸಿದಾಗ ಸಂಬಂಧಿಸಿದ ದಾಖಲಾತಿಗಳು 1 ರಿಂದ 29 ಹಾಳೆಗಳಿದ್ದು ಅವುಗಳ ಮೇಲೆ ನಾನು ಮತ್ತು ಪಂಚರು ಸಹಿ ಮಾಡಿ ಅವುಗಳ ನೆರಳಚ್ಚು ಪ್ರತಿ ಮಾಡಿ ಫಿರ್ಯಾದಿಯಿಂದ ದೃಢೀಕರಿಸಿ ಫಿರ್ಯಾದಿಗೆ ಸಂಬಂಧಿಸಿದ ಮೂಲ ಕಡತವನ್ನು ಮುಂದಿನ ಕ್ರಮದ ಕುರಿತು ಫಿರ್ಯಾದಿಯ ತಾಬಾಕ್ಕೆ ಕೊಟ್ಟೆ. ಆ ದಾಖಲಾತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅದನ್ನು ನೋಡಿದ್ದು ಅದರಲ್ಲಿ ಪ್ರತಿ ಹಾಳೆಯಲ್ಲಿ ನನ್ನ ರುಜು ಇದೆ. ಈಗಾಗಲೇ ಸದರಿ ದಾಖಲಾತಿಯನ್ನು ಒಟ್ಟಾಗಿ ನಿ.ಪಿ. 39 ಎಂದು ಗುರುತಿಸಲಾಗಿದೆ. ನನ್ನ ಮೂಲ ಸಹಿ ಮೂಲ ದಾಖಲಾತಿಯಲ್ಲಿ ಹಾಕಿದ್ದು ನಿ.ಪಿ. 39 ರಲ್ಲಿ ನೆರಳಚ್ಚು ಇರುತ್ತದೆ. ನಾನು ಫಿರ್ಯಾದಿಗೆ ಈ ಮೊದಲು ಕೊಟ್ಟ ಡಿಜಿಟಲ್ ವಾಯ್ಸ್ ರೆಕಾರ್ಡರ್ ನ್ನು ಹಾಜರುಪಡಿಸಿಕೊಂಡು ಅದರಲ್ಲಿದ್ದ ಮುದ್ರಿತ ಧ್ವನಿಯನ್ನು ಆಲಿಸಿ ನೋಡಿದಾಗ ಅದರಲ್ಲಿದ್ದ ಸಂಭಾಷಣೆಯು ಸ್ಪಷ್ಟವಾಗಿ ಕೇಳುವಂತೆ ಇರದೇ ಅಸ್ಪಷ್ಟವಾಗಿತ್ತು. ನಾನು ಸದರಿ

ಸಂಭಾಷಣೆಯನ್ನು ನಂತರದಲ್ಲಿ ಸಿ.ಡಿ. ಗೆ ಪರಿವರ್ತಿಸಿ ಪ್ರಕರಣಕ್ಕೆ ಅಳವಡಿಸಿಕೊಳ್ಳಲಾಗುವುದು ಎಂದು ಪಂಚರಿಗೆ ತಿಳಿಸಿದೆ. ನಂತರ ನಾನು ಜಪ್ತು ಮಾಡಿದ ವಸ್ತು ಸಂ. 6 ರಿಂದ 9(ಎ) ವರೆಗಿನವುಗಳನ್ನು ನನ್ನ ವಶಕ್ಕೆ ಪಡೆದುಕೊಂಡೆ . ಈ ಪ್ರಕರಣದಲ್ಲಿ ಜಪ್ತು ಮಾಡಿದ ವಸ್ತುಗಳಿಗೆ ಸೀಲು ಹಾಕಲು ಉಪಯೋಗಿಸಿದ A ಎಂಬ ಆಂಗ್ಲ ಅಕ್ಷರದ ಮಾದರಿ ಸೀಲನ್ನು ಪಂಚ-1 ರವರ ವಶಕ್ಕೆ ಕೊಟ್ಟು ಅದನ್ನು ನ್ಯಾಯಾಲಯದ ವಿಚಾರಣೆ ಕಾಲಕ್ಕೆ ಹಾಗೂ ತನಿಖಾಧಿಕಾರಿ ಕೇಳಿದಾಗ ಹಾಜರುಪಡಿಸಲು ತಿಳಿಸಿ ಕೊಟ್ಟಿದ್ದು ಅವರಿಂದ ಸ್ವೀಕೃತಿ ಪಡೆದುಕೊಂಡೆ . ನಂತರ ನಾನು ಪಂಚರೊಂದಿಗೆ ತಾಲೂಕು ಪಂಚಾಯತಿ ಕಚೇರಿಗೆ ತೆರಳಿ ಕಚೇರಿ ಆವಕ ವಹಿ , ಜಾವಕ ವಹಿ ಹಾಗೂ ಸಿಬ್ಬಂದಿಗಳ ಹಾಜರಾತಿ ಪುಸ್ತಕವನ್ನು ಪರಿಶೀಲನೆ ಮಾಡಿದೆ. ಅಲ್ಲಿ ಫಿರ್ಯಾದುದಾರನಿಗೆ ಸಂಬಂಧಿಸಿದ ಯಾವುದೇ ಅರ್ಜಿಯು ಕಚೇರಿಯಲ್ಲಿ ಸ್ವೀಕೃತವಾದ ಬಗ್ಗೆ ದಾಖಲಾತಿಗಳು ಸಿಕ್ಕಿರುವುದಿಲ್ಲ. ಅಲ್ಲದೇ ದಿನಾಂಕ 16.09.2013 ರಂದು ಆರೋಪಿ ಕಚೇರಿಗೆ ಹಾಜರಾದ ಬಗ್ಗೆ ಹಾಜರಾತಿ ಪುಸ್ತಕದಲ್ಲಿ ಆರೋಪಿಯ ಸಹಿ ಇರಲಿಲ್ಲ. ಫಿರ್ಯಾದುದಾರ ನಿಂತು ಆರೋಪಿಗೆ ಹಣ ಕೊಟ್ಟ ಸ್ಥಳದ ಚೆಕ್ ಬಂದಿಯನ್ನು ಪಂಚನಾಮೆಯಲ್ಲಿ ನಮೂದಿಸಿದೆ . ಈ ಪಂಚನಾಮೆ ವೇಳೆ ಹಂತ ಹಂತವಾಗಿ ಛಾಯಾಚಿತ್ರವನ್ನು ದೋಸಾ-10 ರವರಿಂದ ಮಾಡಿಸಿದೆ. ನಾನು ಸ್ಥಳದಲ್ಲಿಯೇ ಕಚ್ಚಾ ನಕಾಶೆಯನ್ನು ತಯಾರಿಸಿದ್ದು ಅದಕ್ಕೆ ಪಂಚರು ಹಾಗೂ ನಾನು ಸಹಿ ಮಾಡಿದೆವು . ಈ ಪಂಚನಾಮೆಯನ್ನು ದಿನಾಂಕ 16.09.2013 ರಂದು 20.40 ರಿಂದ ದಿನಾಂಕ 17.09.2013 ರಂದು 01.00 ಗಂಟೆವರೆಗೆ ಕುಮಟಾ ಪ್ರವಾಸಿ ಮಂದಿರದ ಕೊಠಡಿಯಲ್ಲಿ ಕುಳಿತು ಪಂಚರ ಹೇಳಿಕೆಯಂತೆ ನನ್ನ ಉಕ್ತ ಲೇಖನದಲ್ಲಿ ದೋಸಾ-9 ರವರು ಲ್ಯಾಪಟಾಪ್ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದರು. ಸದರಿ ಪಂಚನಾಮೆಗೆ ಪಂಚರು , ಫಿರ್ಯಾದಿ , ಬೆರಳಚ್ಚು ಮಾಡಿದ ಸಿಬ್ಬಂದಿ , ನನ್ನ ಸಹಿ ಇರುತ್ತವೆ. ಅಲ್ಲದೇ ಪಂಚನಾಮೆ ಮುಟ್ಟಿದ್ದ ಕುರಿತು ಆರೋಪಿಯಿಂದ ಸಹಿ ಪಡೆದೆ . ಈಗ ಆ ಪಂಚನಾಮೆ ನೋಡಿರುತ್ತೇನೆ. ಅದರಲ್ಲಿ ಪ್ರತಿ ಪುಟದಲ್ಲಿ ನನ್ನ ರುಜು ಇದೆ. ಆ ಪಂಚನಾಮೆಯನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದೆ. ಅದರಲ್ಲಿ ಕೊನೆ ಪುಟದಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 2(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತಯಾರಿಸಿದ ನಕ್ಷೆಯನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ನಕ್ಷೆಯನ್ನು ಈಗಾಗಲೇ ನಿ.ಪಿ. 38 ಎಂದು ಗುರುತಿಸಲಾಗಿದೆ.

ಸಾಕ್ಷಿಯ ರುಜುವನ್ನು ನಿ.ಪಿ. 38(ಬಿ) ಎಂದು ಗುರುತಿಸಲಾಯಿತು. ಆಗ ತೆಗೆದ ಛಾಯಾಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅವುಗಳನ್ನು ನೋಡಿರುತ್ತೇನೆ. ಅವುಗಳನ್ನು ಈಗಾಗಲೇ ನಿ.ಪಿ. 22 ರಿಂದ 36 ಎಂದು ಗುರುತಿಸಲಾಗಿದೆ. ಆ ಛಾಯಾಚಿತ್ರಗಳು ಮತ್ತು ಈ ಹಿಂದೆ ಹೇಳಿರುವ ಛಾಯಾಚಿತ್ರಗಳನ್ನು ಅಂಟಿಸಿರುವ ಪ್ರತಿ ಹಾಳೆಯಲ್ಲಿ ನನ್ನ ರುಜು ಇವೆ. ಸಾಕ್ಷಿಯ ರುಜುವನ್ನು ನಿ.ಪಿ. 7(ಸಿ), 9(ಸಿ), 11(ಸಿ), 13(ಸಿ), 15(ಸಿ), 17(ಸಿ), 37(ಸಿ), 20(ಸಿ), 22(ಸಿ), 24(ಸಿ), 26(ಸಿ), 28(ಸಿ), 30(ಸಿ), 32(ಸಿ), 34(ಸಿ) ಮತ್ತು 36(ಸಿ) ಎಂದು ಗುರುತಿಸಲಾಯಿತು. ಆಗ ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಜಪ್ತು ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ವಸ್ತು ಸಂ. 7, 8, 9, 9(ಎ) ಅನ್ನು ನೋಡಿರುತ್ತೇನೆ. ಅವುಗಳಿಗೆ ಅಂಟಿಸಿರುವ ಚೀಟಿಗಳಲ್ಲಿ ನನ್ನ ರುಜು ಇದೆ . ಆ ವಸ್ತುಗಳನ್ನು ಈಗಾಗಲೇ ಮು.ಮಾ. 7, 8, 10 ಮತ್ತು 9 ಎಂದು ಗುರುತಿಸಲಾಗಿದೆ. ಸಾಕ್ಷಿಯ ರುಜುಗಳನ್ನು ಮು.ಮಾ. 7(ಸಿ), 8(ಸಿ), 10(ಸಿ) ಮತ್ತು 9(ಸಿ) ಎಂದು ಗುರುತಿಸಲಾಯಿತು.

4. ಅದೇ ದಿನ ದಿನಾಂಕ 17.09.2013 ರಂದು ದಸ್ತಗಿರಿಯಾದ ಆರೋಪಿಯನ್ನು ಬಂಧನ ಅರ್ಜಿ ಬರೆದು ಸಿಬ್ಬಂದಿ ಮೂಲಕ ನ್ಯಾಯಲಯದ ಮುಂದೆ ಹಾಜರುಪಡಿಸಿರುತ್ತೇನೆ. ಪ್ರಾಯೋಗಿಕ ಪಂಚನಾಮೆ ಮತ್ತು ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಜಪ್ತು ಮಾಡಿದ ವಸ್ತುಗಳನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆ . ದಿನಾಂಕ 17.09.2013 ರಂದು ಸಾಕ್ಷಿದಾರರಾದ ದೋಸಾ-1 ರವರ ಮರು ಹೇಳಿಕೆ , ದೋಸಾ-2, 3, 5, 7, 8 ರವರ ಹೇಳಿಕೆಗಳನ್ನು ಪಡೆದುಕೊಂಡೆ. ದಿನಾಂಕ 18.09.2013 ರಂದು ಸಾಕ್ಷಿದಾರರಾದ ದೋಸಾ-9, 10, 11 ರವರ ಹೇಳಿಕೆಯನ್ನು ಪಡೆದುಕೊಂಡೆ. ದಿನಾಂಕ 19.09.2013 ರಂದು ಆರೋಪಿಗೆ ಸಂಬಂಧಿಸಿದ ಸೇವಾ ವಿವರಗಳ ಮಾಹಿತಿ ಕೊಡುವ ಕುರಿತು ಅವರ ಮೇಲಾಧಿಕಾರಿಗೆ ಪತ್ರವನ್ನು ಬರೆದೆ. ನಂತರ ದಿನಾಂಕ 20.09.2013 ರಂದು ದೋಸಾ-12 ರವರ ಹೇಳಿಕೆಯನ್ನು ಪಡೆದುಕೊಂಡೆ. ದಿನಾಂಕ 23.09.2013 ರಂದು ಸಾಕ್ಷಿದಾರರಾದ ದೋಸಾ-4, 5, 13 ರವರ ಹೇಳಿಕೆಯನ್ನು ಪಡೆದುಕೊಂಡೆ . ದೋಸಾ-4 ನನ್ನ ಮುಂದೆ ನಿ.ಪಿ. 40 ರಂತೆ ಹೇಳಿಕೆ ನೀಡಿದ್ದಾರೆ. ದೋಸಾ-4 ತಾನು ಆ ಪ್ರಕಾರ ಹೇಳಿಕೆ ನೀಡಿಲ್ಲ ಎಂದು ನ್ಯಾಯಾಲಯದಲ್ಲಿ ಹೇಳಿರುವುದು ಸುಳ್ಳು

ಇರುತ್ತದೆ. ದೋಸಾ–5 ರವರು ನಿ.ಪಿ. 41 ರಂತೆ ನನ್ನ ಮುಂದೆ ಹೇಳಿಕೆ ನೀಡಿದ್ದಾರೆ. ದೋಸಾ–5 ತಾನು ಆ ಪ್ರಕಾರ ಹೇಳಿಕೆ ನೀಡಿಲ್ಲ ಎಂದು ನ್ಯಾಯಾಲಯದಲ್ಲಿ ಹೇಳಿರುವುದು ಸುಳ್ಳು ಇರುತ್ತದೆ. ಅದೇ ರೀತಿ ದೋಸಾ–13/ಪ್ರಾಸಾ–11 ಶೈಲಾ ಜಿ. ನಾಯ್ಕರವರು ನಿ.ಪಿ. 42 ರಂತೆ ನನ್ನ ಮುಂದೆ ಹೇಳಿಕೆ ನೀಡಿದ್ದಾರೆ. ದೋಸಾ–13/ಪ್ರಾಸಾ–11 ತಾನು ಆ ಪ್ರಕಾರ ಹೇಳಿಕೆ ನೀಡಿಲ್ಲ ಎಂದು ನ್ಯಾಯಾಲಯದಲ್ಲಿ ಹೇಳಿರುವುದು ಸುಳ್ಳು ಇರುತ್ತದೆ.

5. ದಿನಾಂಕ 27.09.2013 ರಂದು ಸದರಿ ಪ್ರಕರಣದಲ್ಲಿ ಜಪ್ತಾದ ಮುದ್ದೆ ಮಾಲುಗಳ ಪರೀಕ್ಷೆ ಕುರಿತು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟೆ. ದಿನಾಂಕ 01.10.2013 ರಂದು ದೋಸಾ–8 ರವರ ಮರು ಹೇಳಿಕೆಯನ್ನು ಪಡೆದುಕೊಂಡೆ. ನಂತರ ನನಗೆ ವರ್ಗಾವಣೆಯಾದ್ದರಿಂದ ಮುಂದಿನ ತನಿಖೆಯನ್ನು ದೋಸಾ–18 ರವರಿಗೆ ವಹಿಸಿಕೊಟ್ಟೆ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ